# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 630 |
| ಸದಸ್ಯರ ಹೆಸರು | : | ಶ್ರೀ ಎಂ.ನಾರಾಯಣಸ್ವಾಮಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 04-03-2021 |
| ಉತ್ತರಿಸುವ ಸಚಿವರು | : | ಗೃಹ, ಕಾನೂನು & ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನ ಸಚಿವರು |

<table>
<tr><th>ಕ್ರ.ಸ</th><th>ವಿಷಯ</th><th>ಉತ್ತರ</th></tr>
<tr><td>(ಅ)</td><td>ಕೋರ್ಟ್ ಆವರಣಕ್ಕೆ ಬರುವಂತಹ ಕಕ್ಷಿದಾರರು, ಆರೋಪಿಗಳಿಗೆ ಯಾವ ರೀತಿ ಸುರಕ್ಷೆ ನೀಡಲಾಗುತ್ತಿದೆ.</td><td>➢ ಮಾನ್ಯ ನ್ಯಾಯಾಲಯಗಳಿಗೆ ಸಿಬ್ಬಂದಿಗಳನ್ನು ಅವಶ್ಯಕತೆಮೇರೆಗೆ ನಿಯೋಜಿಸಿ ಭದ್ರತೆಯನ್ನು ನೀಡಲಾಗಿರುತ್ತದೆ. ಮುಂದುವರೆದು ನ್ಯಾಯಾಲಯಗಳ ಆವರಣಗಳಲ್ಲಿ CCTVಗಳನ್ನು ಅಳವಡಿಸಿ, ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.<br>➢ ಆರೋಪಿಗಳನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸುವಾಗ ಠಾಣೆಯ ಸಿಬ್ಬಂದಿಗಳನ್ನು ನಿಯೋಜಿಸಿ, ಸೂಕ್ತ ಬಂದೋಬಸ್ತ್ ನೀಡಲಾಗುತ್ತಿರುತ್ತದೆ.<br>➢ ಪೊಲೀಸ್ ಠಾಣೆಗಳಿಂದ ಕರೆತರುವ ಆರೋಪಿಗಳಿಗೆ ಬೆಂಗಾವಲು ಪಡೆಗಳನ್ನು ನೇಮಿಸಲಾಗುತ್ತದೆ.<br>➢ ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವ ಸಂದರ್ಭದಲ್ಲಿ ಸಿ.ಎ.ಆರ್ ವಿಭಾಗಗಳಿಂದ ಅಥವಾ ಸಂಬಂದಪಟ್ಟ ಪೊಲೀಸ್ ಠಾಣೆಗಳಿಂದ ಆರೋಪಿಗಳನ್ನು ಬೆಂಗಾವಲು ವಾಹನದಲ್ಲಿ ಕರೆತಂದು ನ್ಯಾಯಾಲಯಕ್ಕೆ ಹಾಜರು ಪಡಿಸಿ ನಂತರ ಸಂಬಂದಪಟ್ಟ ಅಧಿಕಾರಿ ಮತ್ತು ಸಿಬ್ಬಂದಿರವರುಗಳು ಬೆಂಗಾವಲು ವಾಹನದಲ್ಲಿ ವಾಪಸ್ ಕರೆದುಕೊಂಡು ಹೋಗುತ್ತಿರುತ್ತಾರೆ.</td></tr>
<tr><td>(ಆ)</td><td>ಕೋರ್ಟ್ ಆವರಣದಲ್ಲಿ ವಕೀಲರಿಂದಲೇ ಹಲ್ಲೆ ಆಗುವ ವಾತಾವರಣ ಸೃಷ್ಟಿ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?</td><td>ಹೌದು, ಕೋರ್ಟ್ ಆವರಣದಲ್ಲಿ ವಕೀಲರಿಂದಲೇ ಹಲ್ಲೆ ಆಗುವ ವಾತಾವರಣ ಸೃಷ್ಟಿ ಆಗಿರುವ ಬಗ್ಗೆ ಒಟ್ಟು 07 ಪ್ರಕರಣಗಳು ದಾಖಲಾಗಿರುತ್ತವೆ. ವಿವರ ಕೆಳಗಿನಂತಿದೆ.
<table>
<tr><th rowspan="2">ಕ್ರಸ</th><th rowspan="2">ಘಟಕ</th><th colspan="3">ದಾಖಲಾದ ಪ್ರಕರಣಗಳ ಸಂಖ್ಯೆ</th></tr>
<tr><th>2019</th><th>2020</th><th>2021</th></tr>
<tr><td>1</td><td>ಬೆಂಗಳೂರು ನಗರ</td><td>3</td><td>2</td><td>1</td></tr>
<tr><td>2</td><td>ಚಿಕ್ಕಮಗಳೂರು</td><td>0</td><td>1</td><td>0</td></tr>
<tr><td></td><td>ಒಟ್ಟು</td><td>3</td><td>3</td><td>1</td></tr>
</table></td></tr>
<tr><td>(ಇ)</td><td>ಬಂದಿದ್ದಲ್ಲಿ, ಅಂತಹ ವಕೀಲರ ವಿರುದ್ಧ ಯಾವ ರೀತಿಯ ಕಾನೂನು ಕ್ರಮ ಜರುಗಿಸಲಾಗುತ್ತದೆ?</td><td>ನ್ಯಾಯಾಲಯಗಳ ಆವರಣದಲ್ಲಿ ವಕೀಲರಿಂದ ಹಲ್ಲೆ ಆಗುವ ಪ್ರಕರಣಗಳು ವರದಿಯಾದಲ್ಲಿ ಕಾನೂನು ರೀತ್ಯ ಸೂಕ್ತ ಕ್ರಮ ಜರುಗಿಸಲಾಗುತ್ತದೆ. ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಸೂಕ್ತ ಮುನ್ನೆಚ್ಚರಿಕಾ/ಭದ್ರತಾ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.</td></tr>
<tr><td>(ಈ)</td><td>ಮುಂದೆ ಇಂತಹ ದುರ್ಘಟನೆ ನಡೆಯದ ಹಾಗೆ ಯವ ರೀತಿ ಕಾನೂನು ರೂಪಿಸಲಾಗಿದೆ? (ಸಂಪೂರ್ಣ ಮಾಹಿತಿ ನೀಡತಕ್ಕದ್ದು)</td><td>ಮಾನ್ಯ ನ್ಯಾಯಾಲಯಕ್ಕೆ ಪ್ರಮುಖ ಪ್ರಕರಣಗಳಲ್ಲಿ ಮತ್ತು ಸೂಕ್ಷ್ಮ ಪ್ರಕರಣಗಳಲ್ಲಿ ಆರೋಪಿಗಳನ್ನು ಹಾಜರುಪಡಿಸುವಾಗ ಸೂಕ್ತ ಬಂದೋಬಸ್ತ್ ಏರ್ಪಡಿಸಲಾಗುತ್ತದೆ.</td></tr>
</table>

ಹೆಚ್‌ಡಿ 162 ಎಸ್‌ಎಸ್‌ಟಿ 2021

(ಬಸವರಾಜ ಬೊಮ್ಮಾಯಿ)
ಗೃಹ, ಕಾನೂನು & ಸಂಸದೀಯ ವ್ಯವಹಾರಗಳು
ಮತ್ತು ಶಾಸನ ರಚನ ಸಚಿವರು